ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ ೯೦ ದಿನಗಳವರೆಗೆ	6	6.5

* ೯೦ ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ
ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 41 ಸಂಚಿಕೆ :74 ಸೋಮವಾರ ಫೆ.5, 2018 ದೂರವಾಣಿ : 268494 ಪುಟ-4 ರೂ.2-00 NO. HSN-761/ 2018-20

ಕರ್ನಾಟಕವನ್ನು ಕಾಂಗ್ರೆಸ್ ಮುಕ್ತ ಮಾಡುತ್ತೇವೆ : ಮೋದಿ

ಬೆಂಗಳೂರಿನಲ್ಲಿ ಚುನಾವಣಾ ಪ್ರಚಾರಕ್ಕೆ ಚಾಲನೆ

ಬೆಂಗಳೂರು: ಭಾರತದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಉದ್ಯಮ ಸರಳೀಕರಣದ ಬಗ್ಗೆ ಚಿಂತಿಸುತ್ತಿದ್ದರೆ, ಕರ್ನಾಟಕದ ಕಾಂಗ್ರೆಸ್ ಸರ್ಕಾರ ಸರಣಿ ಹತ್ಯೆಗಳ ಬಗ್ಗೆ ಚಿಂತನೆ ನಡೆಸುತ್ತಿದೆ ಎಂದು ಪ್ರಧಾನಿ ಮೋದಿ ಕಟುವಾಗಿ ಟೀಕಿಸಿದ್ದಾರೆ.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಭಾನುವಾರ ಪರಿವರ್ತನಾ ಯಾತ್ರೆಯ ಸಮಾರೋಪ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ರಾಜ್ಯದಲ್ಲಿ ನಡೆಯುತ್ತಿರುವ ಸರಣಿ ಹತ್ಯೆಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರಲ್ಲದೆ, ಕಾಂಗ್ರೆಸ್‌ನ ಆಡಳಿತದಲ್ಲಿ ಕರ್ನಾಟಕ ಅಪರಾಧಿಗಳ ರಾಜ್ಯವಾಗಿ ಮಾರ್ಪಾಡಾಗಿದೆ ಎಂದರು.

ವಿರೋಧಿಗಳನ್ನು ವಿರೋಧಿಸಲು ಜೀವಗಳ ಬೆಲೆ ತೆರುವಂತಾಗುವುದು ಪ್ರಜಾಪ್ರಭುತ್ವಕ್ಕೆ ಮಾರಕವಾದ ಸಂಕೇತ. ಬಿಜೆಪಿ ಕಾರ್ಯಕರ್ತರ ಹತ್ಯೆ ನಡೆದಿರುವುದು ಸಮಾಜದಲ್ಲಿ ಗಂಭೀರ ನೋವನ್ನುಂಟು ಮಾಡಿದೆ. ಈ ನೋವಿಗೆ ವೋಟಿನಿಂದ ಉತ್ತರ ನೀಡಬೇಕಿದೆ ಎಂದು ಮೋದಿ ಹೇಳಿದರು.

ಕರ್ನಾಟಕದ ಜನತೆ ಶ್ರಮಜೀವಿಗಳು. ಭಾರತಕ್ಕಾಗಿ ಹಲವು ಕೊಡುಗೆಗಳನ್ನು ನೀಡಿದ್ದಾರೆ. ನಿನ್ನೆಯಷ್ಟೆ ವಿಶ್ವಕಪ್ ಗೆದ್ದಿರುವ ಭಾರತದ ಅಂಡರ್-19 ಕ್ರಿಕೆಟ್ ತಂಡದ ಕೋಚ್ ರಾಹುಲ್ ದ್ರಾವಿಡ್ ಕನ್ನಡಿಗರು. ಅಂತಹ ಅನೇಕರು ಭಾರತಕ್ಕಾಗಿ ಕೊಡುಗೆ ನೀಡಿದ್ದಾರೆ. ಆದರೆ ಇಲ್ಲಿನ ಕಾಂಗ್ರೆಸ್ ಸರ್ಕಾರ ಕನ್ನಡಿಗರ ಶ್ರಮಕ್ಕೆ ತಣ್ಣೀರೆರಚುತ್ತಿದೆ. ಪ್ರತಿಯೊಂದು ಯೋಜನೆಯಲ್ಲಿಯೂ ಭ್ರಷ್ಟಾಚಾರ ನಡೆಸಿ, ಕಮಿಷನ್ ಹೊಡೆಯುತ್ತಿರುವ ಕಾಂಗ್ರೆಸ್ ಸರ್ಕಾರ 10% ಸರ್ಕಾರ ಎಂದೇ ಖ್ಯಾತಿ ಗಳಿಸಿದೆ ಎಂದು ಮೋದಿ ಆರೋಪಿಸಿದರು.

ಕೋಟಿಗಟ್ಟಲೆ ಹಣ ಲೂಟಿ ಮಾಡಲು ಕಾಂಗ್ರೆಸ್ ಸರ್ಕಾರ ಸ್ಟೀಲ್ ಬ್ರಿಡ್ಜ್ ಷಡ್ಯಂತ್ರ ರೂಪಿಸಿತ್ತು. ಆದರೆ ರಾಜ್ಯದ ಜನತೆ ಹಾಗೂ ಪ್ರತಿಪಕ್ಷದ ಒತ್ತಡಕ್ಕೆ ಮಣಿದು ಹಿಂದೆ ಸರಿಯಿತು. ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಮಂಜೂರು ಮಾಡಲಾಗಿದ್ದ 247 ಕೋಟಿ ರೂಪಾಯಿ ಪೈಕಿ ರಾಜ್ಯ ಸರ್ಕಾರ 70 ಕೋಟಿಯಷ್ಟು ಹಣವನ್ನು ಖರ್ಚು ಮಾಡಿಲ್ಲ . ಸ್ಮಾರ್ಟ್ ಸಿಟಿ ಯೋಜನೆಗಾಗಿ 836 ಕೋಟಿ ಅನುದಾನ ನೀಡಲಾಗಿದ್ದು, 143 ಕೋಟಿಯಷ್ಟು ಕಾಮಗಾರಿ ಆರಂಭವಾಗಿದೆಯಷ್ಟೇ. ಕೃಷಿ, ಶೌಚಾಲಯ, ಬಡವರಿಗೆ ಮನೆ ನಿರ್ಮಾಣ ಸೇರಿದಂತೆ ಯಾವುದರಲ್ಲಿಯೂ ರಾಜ್ಯ ಸರ್ಕಾರಕ್ಕೆ ಕಾಳಜಿ, ಬದ್ಧತೆ ಇಲ್ಲ ಎಂದು ಮೋದಿ ಟೀಕಿಸಿದರು.

ಮಹದಾಯಿ ಬಗ್ಗೆ ಮೌನ : ಪ್ರಧಾನಿ ವಿರುದ್ಧ ಅಸಮಾಧಾನ

ಬೆಂಗಳೂರು : ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಬಿಜೆಪಿಯ ಪರಿವರ್ತನಾ ಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ವೇಳೆ ಪ್ರಧಾನಿ ನರೇಂದ್ರ ಮೋದಿ ಮಹದಾಯಿ ಬಗ್ಗೆ ಮಾತನಾಡಲಿದ್ದಾರೆ ಎಂಬ ನಿರೀಕ್ಷೆ ಇತ್ತು. ಆದರೆ ಆ ನಿರೀಕ್ಷೆ ಹುಸಿಯಾಗಿದ್ದು, ಮಹದಾಯಿ ನೀರಿಗಾಗಿ ಹೋರಾಡುತ್ತಿರುವವರಲ್ಲಿ ಅಸಮಾಧಾನ ಮೂಡಿದೆ.

ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ರಾಜ್ಯ ಸರ್ಕಾರದ ಆಡಳಿತ ವೈಫಲ್ಯ, ಅನುದಾನ ಬಳಕೆ ಮಾಡಿಕೊಳ್ಳದೇ ಇರುವುದು, ರಾಜ್ಯದ ಕಾನೂನು ಸುವ್ಯವಸ್ಥೆ ಬಗ್ಗೆ ಮಾತನಾಡಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ಆದರೆ ಮಹದಾಯಿ ನೀರಿನ ವಿವಾದವನ್ನು ಬಗೆಹರಿಸುವುದಕ್ಕೆ ಸಂಬಂಧಿಸಿದಂತೆ ಒಂದೇ ಒಂದು ಶಬ್ದವನ್ನೂ ಮಾತನಾಡಲಿಲ್ಲ. ಇದು ಮಹದಾಯಿ ನೀರಿಗಾಗಿ ಹೋರಾಡುತ್ತಿರುವವರಲ್ಲಿ ತೀವ್ರ ಅಸಮಾಧಾನ ಮೂಡುವಂತೆ ಮಾಡಿದೆ.

ಮಕ್ಕಳ ಸಾಹಿತ್ಯ ರಚಿಸುವವರ ಸಂಖ್ಯೆ ಕ್ಷೀಣ : ವಿಷಾದ

ಹಾಸನ: ಸಾಹಿತ್ಯ ಲೋಕ ಜ್ಞಾನ, ಜೀವನ ಪಾಠವನ್ನು ಕಲಿಸುತ್ತದೆ. ಸಾಹಿತ್ಯವು ಭಾವನೆಗಳನ್ನು ಉದ್ದೀಪಿಸಿ ಶಮನಗೊಳಿಸಬೇಕು. ಮಕ್ಕಳ ಸಾಹಿತ್ಯವನ್ನು ರಚಿಸುವ ಸಾಹಿತಿಗಳು ಇಂದು ಕಡಿಮೆಯಾಗುತ್ತಿದ್ದಾರೆ ಎಂದು ಹಿರಿಯ ಸಾಹಿತಿ ಹೇಮಾ ಪಟ್ಟಣಶೆಟ್ಟಿ ವಿಷಾದಿಸಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ನಡೆದ 16ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಆಯೋಜಿಸಿದ್ದ 'ಸಾಹಿತ್ಯದ ಸ್ಪರ್ಶ-ಮಹಿಳೆಯ ಭಾವೋತ್ಕರ್ಷ' ವಿಷಯ ಕುರಿತ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಕ್ಕಳಿಗೆ ರುಚಿಸುವ ಸಾಹಿತ್ಯ ರಚನಾಕಾರರು ಬೇಕಾಗಿದ್ದಾರೆ. ಮಕ್ಕಳಿಗೆ ವಚನ, ದಾಸರ ಪದಗಳ ರುಚಿಯನ್ನು ಹತ್ತಿಸಬೇಕು. ವಿದೇಶದಲ್ಲಿರುವ ಮಕ್ಕಳ ದುಡಿಮೆಯನ್ನು ಹೇಳಿಕೊಳ್ಳುವ ನಾವು ಅವರು ನಮಗೆ ಎಷ್ಟು ಬಾರಿ ಕರೆ ಮಾಡಿ ಕುಶಲೋಪರಿ ವಿಚಾರಿಸಿದ್ದಾರೆ ಎಂಬುದನ್ನು ಹೇಳಿಕೊಳ್ಳುವುದಿಲ್ಲ. ಏಕೆಂದರೆ ಅದರ ಪ್ರಮಾಣ ಕಡಿಮೆ ಇರುತ್ತದೆ ಎಂದು ವಿಷಾದಿಸಿದರು.

ಇತ್ತೀಚಿನ ದಿನಗಳಲ್ಲಿ ಮನುಷ್ಯರು ಭಾವನೆಗಳನ್ನು ಕಳೆದುಕೊಳ್ಳುತ್ತಿದ್ದಾರೆ. ದುಡ್ಡಿನ ಹಿಂದೆ ಹೋಗಿ ನೆಮ್ಮದಿ ಹಾಳು ಮಾಡಿಕೊಳ್ಳುತ್ತಿದ್ದಾರೆ. ಮಕ್ಕಳನ್ನು ಹಣ ದುಡಿಯುವ ಯಂತ್ರಗಳನ್ನಾಗಿಸಬೇಡಿ. ಅವರಲ್ಲಿರುವ ಪ್ರತಿಭೆಯನ್ನು ಉದ್ದೀಪಿಸಿ ಎಂದರು.

ಪ್ರಸ್ತುತ ಸಣ್ಣ ವಿಚಾರಗಳಿಗೆ ಆತ್ಮಹತ್ಯೆ ಮಾಡಿಕೊಳ್ಳುವವರು ಹೆಚ್ಚಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಪ್ರತಿಯೊಬ್ಬರೂ ಜ್ಞಾನವನ್ನು ಪಡೆಯುತ್ತಿಲ್ಲ. ಮಾಹಿತಿಯ ಮೊರೆ ಹೋಗುತ್ತಿದ್ದಾರೆ. ಶ್ರಮ ಸಂಸ್ಕೃತಿ ಮರೆಯಾಗುತ್ತಿದೆ ಎಂದು ವಿಶ್ಲೇಷಿಸಿದರು.

ಮಹಿಳಾ ಅಸ್ತಿತ್ವಕ್ಕೆ ಹೋರಾಟ ಅನಿವಾರ್ಯ

ಹಾಸನ : ಮಹಿಳೆಯರು ಇಂದು ಅಸ್ತಿತ್ವಕ್ಕೆ ಹಾಗೂ ಅಸ್ಮಿತೆಗೆ ಹೋರಾಡುವ ಸ್ಥಿತಿ ಎದುರಾಗಿದೆ ಎಂದು ಖ್ಯಾತ ಬರಹಗಾರ್ತಿ ಸಾವಿತ್ರಿ ಮಜುಂದಾರ್ ಅಭಿಪ್ರಾಯಪಟ್ಟರು.

'ಸಾಹಿತ್ಯದ ಸ್ಪರ್ಶ-ಮಹಿಳೆಯ ಭಾವೋತ್ಕರ್ಷ' ಗೋಷ್ಠಿಯಲ್ಲಿ ವಿಷಯ ಮಂಡಿಸಿದ ಅವರು, ಸಮಾನತೆ, ಸಾಮರಸ್ಯಕ್ಕಾಗಿ ಬುದ್ಧ , ಬಸವ, ಅಂಬೇಡ್ಕರ್ ಹೋರಾಡಿದ್ದಾರೆ. ಅವರ ಪ್ರತಿಮೆಗಳನ್ನು ಸಾಹಿತ್ಯ ಪರಿಷತ್ ಆವರಣದಲ್ಲಿ ಅನಾವರಣಗೊಳಿಸಿರುವುದು ಸ್ವಾಗತಾರ್ಹ ಎಂದರು.

ಮಣ್ಣಿನಲ್ಲಿ ಬಿತ್ತಿದರೆ ಬೆಳೆ ಬರುತ್ತದೆ ಎಂಬ ಪರಿಕಲ್ಪನೆ ಮಹಿಳೆಯಿಂದ ಬಂದದ್ದು . ಆದ್ದರಿಂದ ಭೂಮಿ ತಾಯಿಯ ಒಡೆಯರು ಮಹಿಳೆಯರೇ ಆಗಿದ್ದಾರೆ. ಪಶು ಸಂಗೋಪನೆಯ ಪರಿಕಲ್ಪನೆಯೂ ಮಹಿಳೆಯದೇ ಆಗಿದೆ ಎಂದು ವಿವರಿಸಿದರು.

ಚುನಾವಣೆ ಹೊಸ್ತಿಲಲ್ಲಿ ಚುರುಕಾದ ಶಾಸಕ ಪ್ರಕಾಶ್

ಹಾಸನ : ತಮ್ಮ ವರ್ಚಸ್ಸು ತಗ್ಗುತ್ತಿದೆ ಎಂಬ ಸಂದೇಶಗಳಿಂದ ಎಚ್ಚೆತ್ತುಕೊಂಡಿರುವ ಹಾಸನ ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್.ಎಸ್.ಪ್ರಕಾಶ್ ಅವರು, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಥಾನ ಉಳಿಸಿಕೊಳ್ಳಲು ಕ್ಷೇತ್ರದಾದ್ಯಂತ ಬಿರುಸಿನ ಓಡಾಟ ಆರಂಭಿಸಿದ್ದಾರೆ.

ನಾಲ್ಕು ಬಾರಿ ಅವಕಾಶ ನೀಡಿದ್ದು ಸಾಕು. ಪ್ರಕಾಶ್ ಅವರು ಕ್ಷೇತ್ರದ ಜನತೆಗೆ ಕೊಟ್ಟಿದ್ದಕ್ಕಿಂತ ತಮ್ಮ ಕುಟುಂಬದವರನ್ನು ಮುಂದೆ ತರಲು ಹೆಚ್ಚು ಗಮನ ನೀಡಿದ್ದಾರೆಂಬ ಟೀಕೆಗಳು ಕ್ಷೇತ್ರದಲ್ಲಿ ವ್ಯಾಪಕವಾಗಿ ಕೇಳಿಬರತೊಡಗಿ ಹಲವಾರು ದಿನಗಳಾಗಿವೆ. ಅಲ್ಲದೆ ಕಳೆದ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಹೆಚ್.ಕೆ.ಮಹೇಶ್ ಬಹಳ ಕಡಿಮೆ ಅಂತರದಲ್ಲಿ ಸೋಲನುಭವಿಸಿದ್ದರು. ಈ ಬಾರಿ ಬಿ.ಜೆ.ಪಿ. ಆಕಾಂಕ್ಷಿ ಯುವಕರು ಕೂಡ ಪ್ರತಿ ಹಳ್ಳಿ ಹಳ್ಳಿ, ಗಲ್ಲಿ ಗಲ್ಲಿ ಸಂಚರಿಸುತ್ತ, ಪ್ರತಿ ಮತದಾರರನ್ನು ಮಾತನಾಡಿಸುತ್ತ ಭರ್ಜರಿ ಹವಾ ಸೃಷ್ಟಿ ಮಾಡಿರುವುದು ಪ್ರಕಾಶ್ ಚುರುಕುಗೊಳ್ಳಲು ಕಾರಣವಾಗಿದೆ.

ಕಳೆದ ನಾಲ್ಕೂವರೆ ವರ್ಷಗಳಿಂದ ಆರಾಮವಾಗಿದ್ದ ಶಾಸಕರು ಒಂದೆರಡು ತಿಂಗಳಿನಿಂದ ನಸುಕಿನಲ್ಲೇ ಬೇಗ ಎದ್ದು ತಡರಾತ್ರಿಯ ತನಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾ, ದೇವಸ್ಥಾನಗಳ ನಿರ್ಮಾಣಕ್ಕೆ ನೆರವು ನೀಡುವುದು, ರಸ್ತೆಗಳ ಡಾಂಬರೀಕರಣ ಮಾಡಿಸುವುದು ಇನ್ನೂ ಮುಂತಾದ ಕೆಲಸ ಮಾಡುತ್ತಾ ಮತದಾರರನ್ನು ಸೆಳೆಯಲು ಯತ್ನಿಸಿದ್ದಾರೆ. ಈ ಚುರುಕಾದ ಕೆಲಸಗಳು ಮತದಾರರ ಮೇಲೆ ಪ್ರಭಾವ ಬೀರುತ್ತಿರುವುದನ್ನು ಅಲ್ಲಗಳೆಯಲಾಗದು.

1994ರಿಂದ ಶಾಸಕರಾಗಿರುವ ಪ್ರಕಾಶ್ ಅವರು, ಕ್ಷೇತ್ರದ ಮೂಲೆ ಮೂಲೆಗಳಲ್ಲಿ ತಮ್ಮ ಬೆಂಬಲಿಗರ ಪಡೆಯನ್ನು ಸೃಷ್ಟಿ ಮಾಡಿಕೊಂಡಿದ್ದಾರೆ. ತಮ್ಮ ಅವಧಿಯಲ್ಲಿ ನಡೆದ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ನಗರಸಭೆ ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಜಾತ್ಯಾತೀತ ದಳದ ಸದಸ್ಯರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಗೆದ್ದು ಬರಲು ಪ್ರಕಾಶ್ ಅವರು ಪ್ರಮುಖ ಪಾತ್ರ ವಹಿಸಿರುವುದಂತೂ ಹೌದು. ಆದರೆ 20 ವರ್ಷ ಕಾಲ ಶಾಸಕರಾಗಿದ್ದರಿಂದ ಜನತೆ ಅವರಿಂದ ಹೆಚ್ಚು ನಿರೀಕ್ಷೆ ಇಟ್ಟುಕೊಳ್ಳುವುದೂ ಸಹಜ. ತಮ್ಮ ನಿರೀಕ್ಷೆಯ ಎತ್ತರಕ್ಕೆ ಪ್ರಕಾಶ್ ಬೆಳೆಯಲಿಲ್ಲ ಎಂಬ ಅಸಮಾಧಾನ ಮಾತ್ರ ವ್ಯಾಪಕವಾಗಿ ಇದ್ದೇ ಇದೆ.

ಎಲ್ಲಕ್ಕಿಂತ ಹೆಚ್ಚಾಗಿ ತಮ್ಮ ಸಹೋದರನನ್ನು ನಗರಸಭೆಗೆ ತಂದು, ಮಗನನ್ನು ಜಿಲ್ಲಾ ಪಂಚಾಯಿತಿ ಸದಸ್ಯನನ್ನಾಗಿ ಆಯ್ಕೆಗೊಳ್ಳುವಂತೆ ಪ್ರಕಾಶ್ ನೋಡಿಕೊಂಡ ಬಗ್ಗೆ ಮಾತ್ರ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರಲ್ಲೇ ತೀವ್ರ ಆಕ್ರೋಶ ಇದೆ. ನಗರಸಭಾಧ್ಯಕ್ಷರಾಗಿ ಡಾ.ಹೆಚ್.ಎಸ್.ಅನಿಲ್ ಕುಮಾರ್ ಅವರು ಬಹಳ ಕೆಲಸ ಮಾಡುತ್ತಿದ್ದಾರೆಂಬ ಹೆಸರಂತೂ ಇದೆ. ಬಹುಶಃ ಪ್ರಕಾಶ್ ಅವರಿಗೆ ನಗರದಲ್ಲಿ ಹೆಚ್ಚು ಮತ ತಂದು ಕೊಟ್ಟರೆ ಅನಿಲ್ ಅವರ ಕೆಲಸಗಳು ಮುಖ್ಯ ಪಾತ್ರ ವಹಿಸುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ. ಇಷ್ಟಾಗಿಯೂ ವಂಶಾಡಳಿತದ ಟೀಕೆಯನ್ನು ತಪ್ಪಿಸಿಕೊಳ್ಳಲಾಗದು. ಏನೇ ಆದರೂ ಪ್ರಕಾಶ್ ಅವರಿಗೆ ಭಾರೀ ಸವಾಲುಗಳಿರುವುದಂತೂ ಹೌದು.

ವಿದೇಶಿ ವಿದ್ವಾಂಸರ ಕನ್ನಡ ಪ್ರೀತಿಯನ್ನು ನಾವು ಕಲಿಯಬೇಕಾಗಿದೆ

ಮೂರು ದಿನಗಳ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ತೆರೆ

ಹಾಸನ : ಇಟಲಿ, ಫ್ರಾನ್ಸ್ ಹಾಗೂ ಜರ್ಮನಿ ದೇಶಗಳಿಂದ ಭಾರತಕ್ಕೆ ಬಂದಿರುವ ಹಲವು ವಿದ್ವಾಂಸರು ಕನ್ನಡ ಭಾಷೆ ಬೆಳವಣಿಗೆಗಾಗಿ ತೋರಿಸುತ್ತಿರುವ ಅಗಾಧವಾದ ಪ್ರೀತಿ ಬಗ್ಗೆ ಕನ್ನಡಿಗರಾದ ನಾವು ಅರಿಯಬೇಕಾಗಿದೆ. ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ ಎಂದು ಕನ್ನಡ ಪ್ರಾಧ್ಯಾಪಕ ಡಾ.ಸೀ.ಚ.ಯತೀಶ್ವರ್ ತಿಳಿಸಿದ್ದಾರೆ.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಭಾನುವಾರ ನಡೆದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಭಾಷಣ ಮಾಡಿ ಅವರು ಮಾತನಾಡುತ್ತಿದ್ದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಭಾನುವಾರ ನಡೆದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಸಾಹಿತ್ಯಾಸಕ್ತರು.

ಕಳೆದ 15 ವರ್ಷಗಳಿಂದ ಲಂಡನ್‌ನಿಂದ ಬಂದಿರುವ ವಿದ್ವಾಂಸರೊಬ್ಬರು ಮೈಸೂರಿನಲ್ಲಿ ನೆಲೆಸಿದ್ದು, ಅಭಿಷೇಕ್ ಎಂಬ ಹೆಸರಿನಿಂದ ಅವರು ಕನ್ನಡ ಭಾಷಾ ಬೆಳವಣಿಗೆಗೆ ತೊಡಗಿಕೊಂಡಿದ್ದಾರೆ ಎಂದು ಹೇಳಿದರು. ಇದೇ ರೀತಿ ಇಟಲಿಯಿಂದ ಬಂದಿರುವ ವಿದ್ವಾಂಸರೊಬ್ಬರು ಮೈಸೂರಿನಲ್ಲಿ ಕಳೆದ ಒಂದು ವರ್ಷದಿಂದ ನೆಲೆಸಿದ್ದು, ಕನ್ನಡ ಭಾಷೆಯ ವ್ಯಾಕರಣ ಕುರಿತಂತೆ ಅಧ್ಯಯನ ನಡೆಸಿದ್ದಾರೆ ಎಂದು ವಿವರಿಸಿದರು.

ಜರ್ಮನಿಯ ರೆವರೆಂಡ್ ಫಾದರ್ ಕಿಟ್ಟೆಲ್ ಕನ್ನಡ ಭಾಷೆಯ ಬೆಳವಣಿಗೆಗಾಗಿ ಶ್ರಮಿಸಿದರು. ಕನ್ನಡ ಭಾಷೆ ಉಳಿಸಿಕೊಳ್ಳಬೇಕಾಗಿರುವ ಕಾಲ ಸನ್ನಿಹಿತವಾಗಿದ್ದರೂ, ಇತ್ತೀಚೆಗೆ ಕನ್ನಡ ಅಕ್ಷರ ಲೋಕದಲ್ಲಿ ಆಗುತ್ತಿರುವ ಸಾಧನೆಗಳಿಂದ ಕನ್ನಡಕ್ಕೆ ಸೋಲಿಲ್ಲ ಎಂದು ಮನವರಿಕೆ ಮಾಡಿಕೊಳ್ಳಬಹುದಾಗಿದೆ ಎಂದರು.

ಎರಡು ಸಾವಿರ ವರ್ಷಗಳ ಪರಂಪರೆ ಇರುವ ಕನ್ನಡ ನುಡಿ ಶ್ರೇಷ್ಠ ನುಡಿಯಾಗಿದೆ. ಕವಿರಾಜಮಾರ್ಗದ ಶ್ರೀವಿಜಯ, ಪಂಪ, ರನ್ನ , ನಾಗಚಂದ್ರ, ನಾಗವರ್ಮ ಇತರೆ ಸಾವಿರಾರು ಕವಿಗಳು ಕನ್ನಡದ ಬಗ್ಗೆ ಅತೀವ ಕಾಳಜಿ ತೋರಿಸಿ ಇಂದಿನ ಆಧುನಿಕ ಸಾಹಿತ್ಯ ಕಾಲಘಟ್ಟದವರೆಗೂ ಕನ್ನಡ ಉಳಿಯಲು ಕಾರಣಕರ್ತರಾಗಿದ್ದಾರೆ ಎಂದರು.

ಆಂಗ್ಲ ಭಾಷೆಯ ವ್ಯಾಮೋಹಕ್ಕೆ ಜೋತುಬಿದ್ದಿರುವ ಪ್ರತಿಯೊಬ್ಬ ಪೋಷಕರು ಇದೀಗ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಕನ್ನಡದ ಕಣ್ವ ಬಿ.ಎಂ.ಶ್ರೀ.ಯವರು 'ಕನ್ನಡದ ಬೇರುಗಳನ್ನು ಗಟ್ಟಿಗೊಳಿಸಿ, ಒಣಗಿಸಬೇಡಿ' ಎಂದಿರುವುದನ್ನು ಅವರು ಸ್ಮರಿಸಿದರು.

ರಾಷ್ಟ್ರಕವಿ ಕುವೆಂಪು ಅವರ ಚಿಂತನೆಗಳಲ್ಲಿ ನಾವು ಸಾಗಬೇಕಿದೆ. ವಾಟ್ಸಪ್, ಫೇಸ್ ಬುಕ್‌ಗಳಲ್ಲಿ ಇಂದಿನ ಪೀಳಿಗೆ ಕಳೆದು ಹೋಗಿದೆ. ಇದರಿಂದ ಹೊರಬಂದು ಕನ್ನಡ ಪುಸ್ತಕಗಳನ್ನು ಕೊಂಡು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕೆಂದ ಅವರು, ಈ ಮೂಲಕ ಕನ್ನಡ ಭಾಷೆ ಉಳಿಸುವ ಕೆಲಸ ಮಾಡುವಂತೆ ಸಲಹೆ ನೀಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಯಕರಹಳ್ಳಿ ಮಂಜೇಗೌಡ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನಾಧ್ಯಕ್ಷ ಚಂದ್ರಕಾಂತ ಪಡೇಸೂರ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಕ.ಸಾ.ಪ.ದ ಮಾಜಿ ಪದಾಧಿಕಾರಿಗಳು ಮತ್ತಿತರರು ವೇದಿಕೆಯಲ್ಲಿದ್ದರು.

'ಜೆಡಿಎಸ್ ಅಧಿಕಾರಕ್ಕೆ ಬಂದರೆ ರೈತರ ಸಮಸ್ಯೆಗಳಿಗೆ ಪರಿಹಾರ'

ಅರಸೀಕೆರೆ : ರಾಜ್ಯದಲ್ಲಿ ತೆಂಗಿನ ಮರಗಳನ್ನು ನಂಬಿ ಬದುಕುತ್ತಿರುವ ರೈತರ ಗೋಳನ್ನು ಇಂದಿನ ಯಾವ ಸರ್ಕಾರಗಳೂ ಕೇಳುತ್ತಿಲ್ಲ. ಚುನಾವಣೆಯಲ್ಲಿ ಜೆಡಿಎಸ್ ಪಕ್ಷಕ್ಕೆ ಬಹುಮತ ಬಂದರೆ ತೆಂಗು ಬೆಳೆಗಾರರ ಸಮಸ್ಯೆಯನ್ನು ಪರಿಹರಿಸಲಾಗುವುದು ಎಂದು ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡ ಹೇಳಿದರು.



ಅರಸೀಕೆರೆ ಕ್ಷೇತ್ರದ ಶಾಸಕ ಕೆ.ಎಂ.ಶಿವಲಿಂಗೇಗೌಡರ ನೇತೃತ್ವದಲ್ಲಿ ತಾಲ್ಲೂಕಿನ ಗೀಜಿಹಳ್ಳಿ ಗ್ರಾಮದ ರೈತರ ತೋಟದಲ್ಲಿ ಹಮ್ಮಿಕೊಂಡಿರುವ ಅಹೋರಾತ್ರಿ ಧರಣಿ ಸ್ಥಳಕ್ಕೆ ಭಾನುವಾರ ಭೇಟಿ ನೀಡಿದ್ದ ಅವರು, ರಾಜ್ಯ ಸರ್ಕಾರ ಕೆಲವರ ಕೈಗೊಂಬೆಯಾಗಿದ್ದು , ರೈತರ ಯಾವುದೇ ಸಮಸ್ಯೆಗಳಿಗೆ ಕೇಂದ್ರ ಸೇರಿದಂತೆ ರಾಜ್ಯ ಸರ್ಕಾರ ಸ್ಪಂದಿಸುತ್ತಿಲ್ಲ. ಈ ರಾಜ್ಯದ ಜನ ಪ್ರಾದೇಶಿಕ ಪಕ್ಷವನ್ನು ಗೆಲ್ಲಿಸಿದ್ದೇ ಆದಲ್ಲಿ ರೈತರ ಎಲ್ಲಾ ಸಮಸ್ಯೆಗಳಿಗೆ ಖಂಡಿತ ಪರಿಹಾರ ನೀಡಲಾಗುವುದು ಎಂದು ಅಭಯ ನೀಡಿದರು.

ಮಸ್ತಕಾಭಿಷೇಕ :ಅವಘಡ ತಡೆಗೆ ಮುಂಜಾಗ್ರತೆ ವಹಿಸಿ

ಶ್ರವಣಬೆಳಗೊಳ : ಮಸ್ತಕಾಭಿಷೇಕಕ್ಕೆ ಈ ಬಾರಿ ಹೆಚ್ಚು ಜನ ಸೇರುವುದರಿಂದ ಘಟಿಸಬಹುದಾದ ಸಂಭವನೀಯ ವಿಪತ್ತುಗಳ ತಡೆಗೆ ಕ್ರಮ ವಹಿಸಬೇಕು. ಮಹಾಮಸ್ತಕಾಭಿಷೇಕ ಒಂದು ಧಾರ್ಮಿಕ ಕಾರ್ಯಕ್ರಮವಾಗಿದ್ದು , ಈವರೆಗಿನ ಇತಿಹಾಸದಲ್ಲಿ ಒಂದೂ ಅವಘಡ ಸಂಭವಿಸಿಲ್ಲ. ಈ ಬಾರಿಯೂ ಕೂಡ ಯಾವುದೇ ಅವಘಡಗಳು ಘಟಿಸಬಾರದು. ಎಲ್ಲಾ ರೀತಿಯ ಸವಾಲುಗಳಿಗೂ ಮೊದಲೇ ಸನ್ನದ್ಧರಾಗಿರಬೇಕು ಎಂದು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಇಲ್ಲಿನ ಸೇವಾ ನಗರದಲ್ಲಿ ಭಾನುವಾರ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಯಾವುದೇ ಅವಘಡಗಳು ಉಂಟುಮಾಡಬಲ್ಲ ಹಾನಿಯನ್ನು ಸಮರ್ಥವಾಗಿ ತಡೆಯಲು ಅಗತ್ಯ ಸಂಪನ್ಮೂಲಗಳೊಂದಿಗೆ ಸಜ್ಜುಗೊಂಡಿರಬೇಕು. ಪ್ರತಿಯೊಬ್ಬರೂ ಪರಸ್ಪರ ಸಹಕಾರ, ಸಂವಹನದ ಮೂಲಕ ಕರ್ತವ್ಯ ನಿರ್ವಹಿಸಬೇಕು ಎಂದು ಸೂಚನೆ ನೀಡಿದರು.

ನಿರ್ಮಾಣಗಳ ಕುಸಿತ, ಕಾಲ್ತುಳಿತ, ಬೆಂಕಿ ಅನಾಹುತ, ರಾಸಾಯನಿಕ ಸೋರಿಕೆ, ವಿಷಪೂರಿತ ಆಹಾರ, ಹೃದಯಾಘಾತ, ನೂಕು ನುಗ್ಗಲು ಸೇರಿದಂತೆ ಘಟಿಸಬಹುದಾದ ಇನ್ನಿತರೆ ಸಂಭವನೀಯ ಅವಘಡಗಳಿಂದ ಎದುರಾಗಬಹುದಾದ ತುರ್ತು ಸ್ಥಿತಿಯನ್ನು ನಿಭಾಯಿಸಲು ತತ್‌ಕ್ಷಣ ಸ್ಪಂದಿಸಬೇಕು ಎಂದು ಹೇಳಿದರು.

ಈ ಸಂಬಂಧ ಆರೋಗ್ಯ, ಲೋಕೋಪಯೋಗಿ, ಪೊಲೀಸ್, ಅಗ್ನಿಶಾಮಕ ದಳ ಮತ್ತು ತುರ್ತು ಸೇವೆಗಳು ಸೇರಿದಂತೆ ಇನ್ನಿತರೆ ಇಲಾಖೆಗಳನ್ನು ಒಳಗೊಂಡ ಅಧಿಕಾರಿಗಳ ತಂಡಗಳನ್ನು ರಚಿಸಲಾಗುವುದು. ಈ ಎಲ್ಲಾ ತಂಡಗಳು ಸಮನ್ವಯ ಮತ್ತು ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಸಮನ್ವಯಾಧಿಕಾರಿ ಕೆ.ಕೆ.ಪ್ರದೀಪ್ ಮಾತನಾಡಿ, ಸಂಭವನೀಯ ವಿಪತ್ತುಗಳು ಹಾಗೂ ಮುಂಜಾಗ್ರತೆ ಕುರಿತು ವಿಸ್ತೃತವಾಗಿ ಮಾಹಿತಿ ನೀಡಿದರು.

ವಿಪತ್ತು ಘಟಿಸಿದಾಗ ಧೈರ್ಯಗುಂದದೇ ಕರ್ತವ್ಯ ನಿರ್ವಹಿಸಬೇಕು. ಸಂಭವನೀಯ ಅವಘಡಗಳ ಬಗ್ಗೆ ದಿನದ ಇಪ್ಪತ್ತನಾಲ್ಕು ತಾಸು ಕೆಲಸ ನಿರ್ವಹಿಸುವ ಸಂಬಂಧ ಹಿರಿಯ ಹಾಗೂ ನುರಿತ ಅಧಿಕಾರಿಗಳನ್ನು ಒಳಗೊಂಡಂತೆ ನಾಲ್ಕು ತಂಡಗಳನ್ನು ರಚಿಸಲಾಗುವುದು. ಎಲ್ಲಾ ತಂಡಗಳು ತಮಗೆ ಗೊತ್ತುಪಡಿಸಿದ ಸ್ಥಳಗಳಲ್ಲೇ ಸನ್ನದ್ದು ಸ್ಥಿತಿಯಲ್ಲಿ ಇರಬೇಕು ಎಂದು ಹೇಳಿದರು.

ವೈದ್ಯಕೀಯ ತುರ್ತು ಸ್ಥಿತಿಗಳ ಸಂದರ್ಭದಲ್ಲಿ ವೈದ್ಯರಿಗೆ ಇತರರು ಸಹಕರಿಸಬೇಕೇ ವಿನಾ ಸಲಹೆಗಳನ್ನು ನೀಡಬಾರದು. ರೋಗಿಯ ಪರಿಸ್ಥಿತಿ ಆಧರಿಸಿ ವೈದ್ಯರು ಚಿಕಿತ್ಸೆ ನೀಡುವುದರಿಂದ ಈ ಬಗ್ಗೆ ಯಾರೊಬ್ಬರೂ ಸಲಹೆ ನೀಡಬಾರದು ಎಂದು ಮನವಿ ಮಾಡಿದರು.

ವಿಪತ್ತುಗಳು ಘಟಿಸಿದಾಗ ತತ್‌ಕ್ಷಣವೇ ಈ ಕುರಿತ ಮಾಹಿತಿಯನ್ನು ಕಂಟ್ರೋಲ್ ರೂಂ ಗಮನಕ್ಕೆ ತರಬೇಕು. ಅಲ್ಲದೆ ಈ ಸಂಬಂಧ ಸ್ಯಾಟಲೈಟ್ ಆಫೀಸ್ ಮತ್ತು ಡೇಟಾ ಕೇಂದ್ರ ಸ್ಥಾಪನೆ, ಸೂಚನೆ ಮತ್ತು ನಿಯಂತ್ರಣಕ್ಕೆ ಸಂಬಂಧಿಸಿದಂತೆ ವಾಹನದ ಗಸ್ತು ಇರಲಿದ್ದು , ಎಲ್ಲರೂ ಅಗತ್ಯ ಸಹಕಾರ ನೀಡಬೇಕು ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಹುಲ್ ಕುಮಾರ್ ಶಹಾಪುರವಾಡ್ ಮಾತನಾಡಿ, ಪೊಲೀಸ್ ಇಲಾಖೆ ಎಲ್ಲಾ ಸಂದರ್ಭದಲ್ಲಿ ಅಪಾಯ, ಸವಾಲುಗಳನ್ನು ಎದುರಿಸಲು ಸನ್ನದ್ಧವಾಗಿರುತ್ತದೆ. ಅದೇ ರೀತಿ ಅಗ್ನಿಶಾಮಕ ದಳ, ಆರೋಗ್ಯ ಇಲಾಖೆ, ಲೋಕೋಪಯೋಗಿ, ಸಾರಿಗೆ ಇಲಾಖೆ, ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಸೇವೆ ಹೆಚ್ಚು ಮಹತ್ವವಾದದ್ದು ಎಂದರು.

(-4ನೇ ಪುಟಕ್ಕೆ)

ಪ್ರತಾಪ್ ಸಿಂಹಗೆ ಹಾ.ಮಾ.ನಾ. ಪ್ರಶಸ್ತಿ

ಮಂಡ್ಯ : ಕರ್ನಾಟಕ ಸಂಘದ ಆಶ್ರಯದಲ್ಲಿ 6ನೇ ವರ್ಷದ ಡಾ.ಹಾ.ಮಾ.ನಾ. ಪ್ರಶಸ್ತಿ ಪ್ರದಾನ ಸಮಾರಂಭವು ಫೆ.5 ರಂದು ಸಂಜೆ 6 ಗಂಟೆಗೆ ಮಂಡ್ಯದ ರೈತ ಸಭಾಂಗಣದಲ್ಲಿ ನಡೆಯಲಿದೆ.

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ಸಮಾರಂಭದಲ್ಲಿ ಮೈಸೂರು ಲೋಕಸಭಾ ಕ್ಷೇತ್ರದ ಸದಸ್ಯ ಪ್ರತಾಪ್ ಸಿಂಹ ಅವರಿಗೆ ಡಾ.ಹಾ.ಮಾ.ನಾ. ಪ್ರಶಸ್ತಿ, (50 ಸಾವಿರ ರೂ. ನಗದು) ಹಾಗೂ ಬರಹಗಾರ್ತಿ ಪಿ.ಕುಸುಮ ಅವರಿಗೆ ಡಾ.ಹಾ.ಮಾ.ನಾ. ಯುವ ಪ್ರಶಸ್ತಿ (25 ಸಾವಿರ ರೂ. ನಗದು) ನೀಡಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ.

ಸಕಲೇಶಪುರ ತಾಲ್ಲೂಕಿನಲ್ಲಿ ಜನಿಸಿದ ಪ್ರತಾಪ್ ಸಿಂಹ ಪತ್ರಕರ್ತನಾಗಿ, ಅಂಕಣ ಬರಹಗಾರನಾಗಿ ಹೆಸರು ಮಾಡಿ ಸಂಸದರಾಗಿದ್ದಾರೆ.

ರೂರಲ್ ಇಂಡಿಯಾನೇ ರಿಯಲ್ ಇಂಡಿಯಾ

ಸಾಹಿತ್ಯ ಸಮ್ಮೇಳನದಲ್ಲಿ ವಾಗ್ಮಿ ಚಟ್ನಳ್ಳಿ ಮಹೇಶ್



ಹಾಸನ : ಭೂಮಿಯೇ ಒಂದು ವಿಶ್ವವಿದ್ಯಾಲಯ. ಶಬ್ದ ಸಂಪತ್ತು ಹುಟ್ಟುಹಾಕುವುದೇ ಹಳ್ಳಿ ಜನರ ನೆಲದ ಸಂಸ್ಕೃತಿ. ಹಳ್ಳಿಯ ಜನರ ಜನಪದ ಸಾಮ್ರಾಜ್ಯ ಒಂದು ನಗೆ ಸಾಮ್ರಾಜ್ಯ ಎಂದು ಖ್ಯಾತ ಸಾಹಿತಿ ಹಾಗೂ ವಾಗ್ಮಿ ಚಟ್ನಳ್ಳಿ ಮಹೇಶ್ ಹೇಳಿದ್ದಾರೆ.

16ನೇ ಕನ್ನಡ ಸಾಹಿತ್ಯ ಸಮ್ಮೇಳನದ ಜನ-ದನಿ ಕವಿಗೋಷ್ಠಿಯಲ್ಲಿ 'ಜಾನಪದದಲ್ಲಿ ಗಾಯನ ಸೊಗಡು' ವಿಷಯ ಕುರಿತು ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳಲ್ಲಿನ ನೈಜವಾದ ಹಾಸ್ಯಪ್ರಜ್ಞೆಯ ಬಗ್ಗೆ ವಿವರಿಸಿದರು. ನಮ್ಮ ಹಿಂದಿನವರು ಸುಳ್ಳಿನ ಮೂಲಕ ಅದಕ್ಕೆ ನೈಜತೆಯ ಸ್ಪರ್ಶ ನೀಡುತ್ತಿದ್ದರಲ್ಲದೆ, ಅವರ ಕಲ್ಪನೆಯಲ್ಲಿ ಪ್ರೀತಿಯ ಉತ್ಕರ್ಷ ಇರುತ್ತಿತ್ತು ಎಂದರು.

ಹಸುಗೂಸುಗಳು ಹಳ್ಳಿಗಳಲ್ಲಿ ರಚ್ಚೆ ಹಿಡಿದವರಂತೆ ಅಳುತ್ತಿದ್ದಾಗ, ಮಹಿಳೆಯರು ಜಾನಪದ ಹಾಡುಗಳ ಮೂಲಕ ಅವುಗಳನ್ನು ಸಂತೈಸುತ್ತಿದ್ದರು. 'ರಚ್ಚೆ ಕಂದಮ್ಮ ಉಚ್ಚೆಯ ಹುಯ್ದರೆ ಬಚ್ಚಲು ತುಂಬಿ, ಬಣ ತುಂಬಿ, ಹಳ್ಳದ ಗದ್ದೆಗೆ ಹರಿದಾವೋ' ಎಂದು ಹಾಡುವ ಮೂಲಕ ಅಲ್ಲೇ ಜನಪದಗಳನ್ನು ಸೃಷ್ಟಿಸುತ್ತಿದ್ದರು ಎಂದರು.

ಸಾಂಸ್ಕೃತಿಕ ಹೊಣೆಗಾರಿಕೆ ಪ್ರತಿಯೊಂದು ಕುಟುಂಬದಿಂದ ಬರಬೇಕಿದೆ ಎಂದ ಅವರು, ಮುಂದಿನ ಪೀಳಿಗೆಗಾಗಿ ಜನಪದವನ್ನು ಉಳಿಸಬೇಕಾಗಿದೆ. ಅನುಭವದ ಮೂಲಕ ನಮ್ಮ ಜನಪದರು, ಹಿಂದೆ ನಿಸರ್ಗಮುಖಿಯಾದ ಶಿಕ್ಷಣ ಹಾಗೂ ಗುರುಕುಲ ಸಂಸ್ಕೃತಿಯಿಂದ ಪ್ರೇರೇಪಿತರಾದರು. ರೋಚಕ ಪ್ರಸಂಗಗಳನ್ನು ಕಲಿತರು ಎಂದರು.

ಕೃಷಿ ಕಾರ್ಯಗಳಲ್ಲಿ ತೊಡಗಿರುವವರ ಬಳಿ ಬಂದ ಯುವಕನೊಬ್ಬ , ಸಾವಿರ ಹೆಡೆಯ ಸರ್ಪದ ಕಥಾನಕವನ್ನು ತಿಳಿಸಿ, ಎಲ್ಲರೂ ದಿಗ್ಭ್ರಮೆಪಡುವಂತೆ ಮಾಡುತ್ತಾನೆ. ಸಾವಿರ ಹೆಡೆಯ ಸರ್ಪವನ್ನು ನೋಡಿದೆ ಎನ್ನುವ ಅವನು, ಸ್ವಲ್ಪ ಹೊತ್ತಿನ ನಂತರ ತನ್ನ ಮಾತಿನ ಧಾಟಿಯನ್ನೇ ಬದಲಿಸುತ್ತಾ ಬರುತ್ತಾನೆ. ಸಾವಿರ ಹೆಡೆ ಇತ್ತಾ ಎಂದಾಗ, ಇಲ್ಲ 101 ಹೆಡೆ ಸರ್ಪ ಅನ್ನುತ್ತಾನೆ. ನಂತರ ಏಳು ಹೆಡೆ, 3 ಹೆಡೆ ಎಂದವನು ಕೊನೆಗೆ ಒಂದು ಹೆಡೆ ಸರ್ಪ ಅನ್ನುತ್ತಾನೆ. ಅಲ್ಲಿದ್ದವರು 'ಸುಳ್ಳು ಹೇಳಬೇಡ, ಸತ್ಯ ಹೇಳು' ಎಂದಾಗ, ಬೇಲಿ ಸಾಲಿನಲ್ಲಿ ಸರಕ್ ಎಂಬ ಶಬ್ದ ಬಂತು. ತಿರುಗಿ ನೋಡಿದಾಗ ಅಲ್ಲಿ ಏನೂ ಇರಲಿಲ್ಲ ಎಂದು ಬೊಗಳೆ ಬಿಡುತ್ತಾನೆ' ಎಂದು ಅವನ ಹಾಸ್ಯಪ್ರಜ್ಞೆಯ ಬಗ್ಗೆ ಚಟ್ನಳ್ಳಿ ಮಹೇಶ್ ವಿವರಿಸಿದರು.

ಗಾಂಧೀಜಿಯವರ ರೂರಲ್ ಇಂಡಿಯಾನೇ ರಿಯಲ್ ಇಂಡಿಯಾ ಎಂದು ಅಭಿಪ್ರಾಯಪಟ್ಟರು. ಸಹಜ ಹಾಸ್ಯ ಸಾಹಿತಿ ದಿ॥ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರನ್ನು ಅವರು ಸ್ಮರಿಸಿಕೊಂಡರು.

ಡಾ॥ಉದಯಶಂಕರ ಬಾಬು ಜಿ.ಎಲ್.
ಎಂ.ಡಿ.(ಮೆಡಿಸಿನ್)
ಕನ್ಸ್‌ಲ್ಟೆಂಟ್ ಫಿಸಿಷಿಯನ್
(ಫಾರ್ಮರ್ ಅಸಿಸ್ಟೆಂಟ್ ಪ್ರೊಫೆಸರ್ ಆಫ್ ಮೆಡಿಸಿನ್, ಕೆ.ಎಂ.ಸಿ.ಆಸ್ಪತ್ರೆ, ಮಣಿಪಾಲ್)
ಹೇಮಾವತಿ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದ ಇವರು ಇನ್ನು ಮುಂದೆ ಈ ಕೆಳಕಂಡ ವಿಳಾಸದಲ್ಲಿ ಲಭ್ಯರಿರುತ್ತಾರೆ.
ಸಂದರ್ಶನದ ಸಮಯ:
ಬೆಳಗ್ಗೆ 9-30 ರಿಂದ 2-30 ಗಂಟೆಯವರೆಗೆ , ಸಂಜೆ 5-30 ರಿಂದ 8-00 ಗಂಟೆಯವರೆಗೆ
ಭೇಟಿಗಾಗಿ: 08172 - 262434, 8951289047

ಇಂದು ಶುಭಾರಂಭ
ಸಿರಿ ಪಾಲಿಕ್ಲಿನಿಕ್ ಮತ್ತು ಡಯಾಬಿಟಿಸ್ ಕೇರ್ ಕ್ಲಿನಿಕ್
ಸತ್ಯಂ ಆರ್ಕೆಡ್, ದೇನಾ ಬ್ಯಾಂಕ್ ಬಿಲ್ಡಿಂಗ್, ಮೋರ್ ಶಾಪ್ ಸಮೀಪ,
ಸಹ್ಯಾದ್ರಿ ಸರ್ಕಲ್, ಸಾಲಗಾಮೆ ರಸ್ತೆ, ಹಾಸನ-573201